ದಿ.06.08.2026

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1953/2025**

**ಪ್ರಾ.ಸಾಃ1**

**ಚಾಸಾಃ1**

| | | |
|---|---|---|
| ಸಾಕ್ಷಿಯ ಹೆಸರು | : | ನವೀನ್ |
| ತಂದೆಯ ಹೆಸರು | : | ಪಾಲಯ್ಯ |
| ವಯಸ್ಸು | : | 30 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ಬಂಜಗೊಂಡನಹಳ್ಳಿ ಗ್ರಾಮ |

**ದಿಃ06.08.2026 ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಆರೋಪಿ ಗೊತ್ತಿಲ್ಲ. ಚಾಸಾ-13 ಗೊತ್ತಿಲ್ಲ. ಈ ಪ್ರಕರಣದಲ್ಲಿ ಮರಣ ಹೊಂದಿರುವ ಅಪರಿಚಿತ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಯಾವ ವಾಹನದಿಂದ ಅಪಘಾತವಾಗಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತಕ್ಕೊಳಗಾದ ವ್ಯಕ್ತಿಗೆ ನಾನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿರುವುದಿಲ್ಲ. ಅಪಘಾತ ಪಡಿಸಿದ ವಾಹನ ನೊಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಹೇಳಿಕೆ ದೂರು ಆಗಿದ್ದು, ತೋರಿಸಿದ್ದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-1 ಕ್ಕೆ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ 1 ವರ್ಷದ ಹಿಂದೆ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿರುವ ಅಂಶಗಳು ನನಗೆ ತಿಳಿದಿರುವುದಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು

ದಿ.06.08.2026

ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

ದಿನಾಂಕ 12.09.2025 ರಂದು ನಾನು ಕೆಲಸದ ನಿಮ್ಮಿತ್ತ ಟಿ.ನುಲೇನೂರು ಗೇಟಿಗೆ ಹೋಗಿದ್ದು, ಗೇಟಿನ ಬಳಿ ರಸ್ತೆಯ ಪಕ್ಕ ಅಂಗಡಿಯ ಬಳಿ ನಿಂತುಕೊಂಡಿದ್ದಾಗ ಚಿತ್ರದುರ್ಗದ ಕಡೆಯಿಂದ ಯಾವುದೋ ಒಂದು ಕಾರಿನ ಚಾಲಕ ತನ್ನ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಗೇಟಿನ ಬಳಿ ನಡೆದುಕೊಂಡು ಹೋಗುತ್ತಿದ್ದ ಯಾವುದೋ ಒಬ್ಬ ವ್ಯಕ್ತಿ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಕೂಡಲೇ ನಾನು ಬಸ್ ನಿಲ್ದಾಣದ ಬಳಿ ಇದ್ದವರು ಗಾಯಗೊಂಡ ವ್ಯಕ್ತಿಯನ್ನು ನೋಡಿ ಆ ವ್ಯಕ್ತಿಯ ತಲೆಗೆ ಬೆನ್ನಿಗೆ ಹಾಗೂ ಇತರೆ ಕಡೆ ಪೆಟ್ಟು ಬಿದ್ದು ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಸದರಿ ಅಪಘಾತ ನಡೆದಾಗ ಸಮಯ ರಾತ್ರಿ 08.00 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಅಪಘಾತಪಡಿಸಿದ ಕಾರು ಸ್ಥಳದಲ್ಲಿ ಇದ್ದು, ಅದರ ನಂಬರು ನೋಡಲಾಗಿ ಕೆಎ-03-ಎಂ.ಡಬ್ಲ್ಯೂ-5814 ಆಗಿತ್ತು ಎಂದರೆ ಸರಿಯಲ್ಲ. ಅದರ ಚಾಲಕನು ಸ್ಥಳದಲ್ಲಿಯೇ ಇದ್ದು ಆತನ ಹೆಸರು ಕೇಳಲಾಗಿ ಮಂಜಿತ್ ಪಟೇಲ್ ತಂದೆ ರುದ್ರೆಗೌಡ ಪಟೇಲ್, ಚಿತ್ರದುರ್ಗ ಟೌನ್ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಗಾಯಾಳು ಪ್ರಜ್ಞೆ ತಪ್ಪಿದ್ದರಿಂದ ಆತನ ಹೆಸರು ವಿಳಾಸ ಗೊತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. ಆತನು ಗಂಡಾಗಿದ್ದು, ಆತನ ವಯಸ್ಸು ಸುಮಾರು 50 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಗಾಯಗೊಂಡ ವ್ಯಕ್ತಿಯನ್ನು ಕಾರಿನ ಚಾಲಕನು ಮತ್ತು ಇತರೆಯವರು ಅದೇ ಕಾರಿನಲ್ಲಿ ಹಾಕಿಕೊಂಡು ಚಿಕಿತ್ಸೆಗಾಗಿ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಗಾಯಗೊಂಡ ವ್ಯಕ್ತಿಗೆ ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದು, ದಿನಾಂಕ 13.09.2025 ರಂದು ಠಾಣೆಗೆ ಹಾಜರಾಗಿ ಮಧ್ಯಾಹ್ನ 02.00 ಗಂಟೆಗೆ ಲಿಖಿತ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ದಿನಾಂಕ 23.09.2025 ರಂದು ಹೊಳಲ್ಕೆರೆ ಪೊಲೀಸ್ ಠಾಣೆಗೆ ಹಾಜರಾಗಿ ಅಪರಿಚಿತ ವ್ಯಕ್ತಿಯು ದಿನಾಂಕ 16.09.2025 ರಂದು ಮಧ್ಯಾಹ್ನ 02.50 ಗಂಟೆ ಸಮಯದಲ್ಲಿ ಮೃತಪಟ್ಟಿರುತ್ತಾನೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದೇ ರೀಶಿ ಅಪಘಾತ ಪಡಿಸಿದ ವ್ಯಕ್ತಿಯ ಗುರುತಿನ ವ್ಯಕ್ತಿಯ ಬಗ್ಗೆ ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

ಆರೋಪಿಯೇ ಅಪರಿಚಿತ ವ್ಯಕ್ತಿಗೆ ಅತೀವೇಗ ಮತ್ತು ಅಜಾಗರುಕಾತೆಯಿಂದ ಚಾಲನೆ

ದಿ.06.08.2026

ಮಾಡಿಕೊಂಡು ಬಂದು ಅಪಘಾತ ಪಡಿಸಿದ್ದರು ಸಹ ಆರೋಪಿ ಪರಿಚಯಸ್ಥನಾಗಿದ್ದರಿಂದ ಆರೋಪಿಗೆ ಅನುಕೂಲವಾಗಿಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.